
# ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು

ಕನ್ನಡಕ್ಕೆ: **ಶೋಯಿಂಕಾ ಎಚ್.ಎನ್.**




ನಾನು ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಒಂದು ಕನಸು ಕಂಡಿದ್ದೆ. ಅದರಲ್ಲಿ ನಾನು ಈ ದೇಶವನ್ನು ಒಂದು ಶಾಂತಿಯುತ ತೋಟವಾಗಿ, ಮತ್ತು ಆ ತೋಟದಲ್ಲಿ ಮುಸ್ಲಿಮರು, ಹಿಂದೂಗಳು ಹಾಗೂ ಎಲ್ಲರೂ ಒಟ್ಟಾಗಿ ಸಹೋದರರಾಗಿ, ಸ್ನೇಹಿತರಾಗಿ ಬಾಳುವ ಹಾಗೆ ಕಲ್ಪಿಸಿಕೊಂಡಿದ್ದೆ. ಈಗ ನೀವೆಲ್ಲರೂ ನನ್ನ ಕನಸನ್ನು ನನಸು ಮಾಡಲು ಪ್ರಯತ್ನಿಸಬೇಕು.

ನಾವು ಅಲ್ಪಸಂಖ್ಯಾತರನ್ನು ಪ್ರೀತಿಸಿದರೆ ಅವರೂ ನಮಗೆ ಪ್ರೀತಿಯನ್ನು ವಾಪಸ್ಸು ನೀಡುತ್ತಾರೆ. ನಾವು ಕೋಟಿಗಟ್ಟಲೆ ಅಲ್ಪಸಂಖ್ಯಾತರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕೆ ಆಗುವುದೆ? ನಾವು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಯಾರು ಬೇರೆಯವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕೆ ಹೋಗುತ್ತಾನೋ ಸ್ವತಃ ಅವನೇ ಒಬ್ಬ ಗುಲಾಮನಾಗುತ್ತಾನೆ...

ನಾನು ಹಿಂದೂಗಳಿಗೆ ಹೇಗೆ ಸ್ನೇಹಿತನೋ, ಹಾಗೆಯೇ ಮುಸ್ಲಿಮರ ಮತ್ತು ಎಲ್ಲ ಧರ್ಮಗಳ ಜನರ ಸ್ನೇಹಿತ ಕೂಡ. ಈ ದೇಶದ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಸಹೋದರ, ಸಹೋದರಿಯರೊಡನೆ ಶಾಂತಿ ಮತ್ತು ಭದ್ರತೆಯಿಂದ